Teachingninja.in

Latest Govt Job updates

Private Job updates

Free Mock tests available

Visit - teachingninja.in

Teachingninja.in

# KEA Assistant Professor

## Previous Year Paper
## (2016) Kannada

Teachingninja.in

# ಸ್ಪರ್ಧಾತ್ಮಕ ಪರೀಕ್ಷೆ 2016

**GFGC**

| ದಿನಾಂಕ | ವಿಷಯ | ವಿಷಯ ಸಂಕೇತ | ಸಮಯ |
|---|---|---|---|
| 05-03-2016 | ಕನ್ನಡ | 01 | ಮ.2.00 ರಿಂದ ಸಂ.5.00 ರ ವರೆಗೆ |

| ಗರಿಷ್ಠ ಅಂಕಗಳು | ಒಟ್ಟು ಅವಧಿ | ಉತ್ತರಿಸಲು ಇರುವ ಗರಿಷ್ಠ ಅವಧಿ |
|---|---|---|
| 200 | 210 ನಿಮಿಷಗಳು | 180 ನಿಮಿಷಗಳು |

| ನಿಮ್ಮ ನೊಂದಣಿ ಸಂಖ್ಯೆಯನ್ನು ಬರೆಯಿರಿ | | | | | ಪ್ರಶ್ನೆಪತ್ರಿಕೆಯ ವಿವರಗಳು |
|---|---|---|---|---|---|
| | | | | | ಪ್ರಶ್ನೆ ಪತ್ರಿಕೆ ಕ್ರಮಸಂಖ್ಯೆ ಮತ್ತು ವರ್ಷನ್ ಸಂಖ್ಯೆ |
| | | | | | XXXXXX |

Teachingninja.in

**ಮಾಡಿ**

1. ನೊಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
2. ಕೇಂದ್ರ ಸಂಕೇತವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
3. ಪರೀಕ್ಷಾ ವಿಷಯವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಹಾಗು ವಿಷಯದ ಸಂಕೇತವನ್ನು ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
4. ಕೊಠಡಿ ಮೇಲ್ವಿಚಾರಕರಿಂದ ಈ ಪ್ರಶ್ನೆ ಪತ್ರಿಕೆಯನ್ನು ನಿಮಗೆ 2ನೇ ಬೆಲ್ ಆದ ನಂತರ ಅಂದರೆ ಮ. 1.55 ಆದ ನಂತರ ಕೊಡಲಾಗುವುದು.
5. ಪ್ರಶ್ನೆ ಪತ್ರಿಕೆಯ ಕ್ರಮ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆಯಬೇಕು.
6. ಪ್ರಶ್ನೆ ಪತ್ರಿಕೆಯ ವರ್ಷನ್ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
   ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಕಡ್ಡಾಯವಾಗಿ ಸಹಿ ಮಾಡಬೇಕು.

**ಮಾಡಬೇಡಿ**

1. ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ ಮಾರ್ಕನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.
2. ಮೂರನೇ ಬೆಲ್ ಮ. 2.00 ಕ್ಕೆ ಆಗುತ್ತದೆ. ಅಲ್ಲಿಯವರೆಗೂ,
   - ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಪಿನ್ ಅಥವಾ ಸೀಲ್ ಅನ್ನು ತೆಗೆಯಬಾರದು.
   - ಪ್ರಶ್ನೆ ಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು.
   - ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.

## ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಯು ಒಂದು ಹೇಳಿಕೆಯನ್ನು ಒಳಗೊಂಡಿದ್ದು ಮತ್ತು 4 ಬಹು ಆಯ್ಕೆ ಉತ್ತರಗಳು ಇರುತ್ತವೆ.
2. ಮೂರನೇ ಬೆಲ್ ಅಂzರೆ ಮ. 2.00 ರ ನಂತರ ಪ್ರಶ್ನೆ ಪತ್ರಿಕೆಯ ಬಲಭಾಗದಲ್ಲಿರುವ ಪಿನ್ / ಸೀಲ್ ತೆಗೆದು ಈ ಪ್ರಶ್ನೆ ಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಐಟಂಗಳು ಬಿಟ್ಟುಹೋಗಿದ್ದಲ್ಲಿ, ಅದನ್ನು ಖಚಿತಪಡಿಸಿಕೊಂಡು, ಈ ರೀತಿ ಆಗಿದ್ದರೆ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
3. ಮುಂದಿನ 180 ನಿಮಿಷಗಳಲ್ಲಿ
   - ಪ್ರತಿ ಪ್ರಶ್ನೆಯನ್ನು ಎಚ್ಚರಿಕೆಯಿಂದ ಓದಿ.
   - ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
   - ಪ್ರಶ್ನೆ ಪತ್ರಿಕೆಯಲ್ಲಿನ ಪ್ರಶ್ನೆಗೆ ಅನುಗುಣವಾಗಿರುವ ಸರಿ ಉತ್ತರವನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣವಾಗಿ ತುಂಬುವುದು.

   ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿರುವ ವೃತ್ತಗಳನ್ನು ತುಂಬುವ ಸರಿಯಾದ ವಿಧಾನ : (A) ● (C) (D)

4. ಈ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
5. ಪ್ರಶ್ನೆ ಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ರಫ್ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
6. ಕೊನೆಯ ಬೆಲ್ ಅಂದರೆ ಸಂ. 5.00 ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ. ನಿಮ್ಮ ಎಡಗೈ ಹೆಬ್ಬರಳ ಗುರುತನ್ನು ನಿಗದಿತ ಜಾಗದಲ್ಲಿ ಹಾಕಿ.
7. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಯಥಾಸ್ಥಿತಿಯಲ್ಲಿ ನೀಡಿರಿ.
8. ಕೊಠಡಿ ಮೇಲ್ವಿಚಾರಕರು, ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ ತನ್ನ ವಶದಲ್ಲಿ ಇಟ್ಟುಕೊಂಡು ತಳಬದಿಯ ಯಥಾಪ್ರತಿಯನ್ನು ಅಭ್ಯರ್ಥಿಗಳಿಗೆ ಸ್ವಯಂ ಮೌಲ್ಯಮಾಪನಕ್ಕಾಗಿ ಮನೆಗೆ ಕೊಂಡೊಯ್ಯಲು ಕೊಡುತ್ತಾರೆ.
9. ಉತ್ತರ ಪತ್ರಿಕೆಯ ನಕಲನ್ನು ಒಂದು ವರ್ಷ ಕಾಲ ಸುರಕ್ಷಿತವಾಗಿ ಇಡಿ.

**MASTER**

Teachingninja.in

1. ಜಿನವಲ್ಲಭನ ಶಾಸನ ದೊರೆತ ಸ್ಥಳ

(A) ಬೊಮ್ಮಲಮ್ಮ ಗುಟ್ಟ (B) ಕರೀಂ ನಗರ

(C) ಗಂಗಾಧರಂ (D) ಕುಕ್ಕ್ಯಾಲ

2. ಅಗಮ್ಯಗಮನ (ಇನ್ಸೆಸ್ಟ್ ) ಸಂಬಂಧದ ವಸ್ತುವುಳ್ಳ ನಾಟಕ

(A) ಶಾಂತಾ (B) ಅಂಜು ಮಲ್ಲಿಗೆ

(C) ಅಹಲ್ಯೆ (D) ಹಿಟ್ಟಿನ ಹುಂಜ

3. ಮೂಲ ಪಾಠದಲ್ಲಿಲ್ಲದ, ನಂತರ ಬೇರೊಬ್ಬನಿಂದ ಸೇರ್ಪಡೆಗೊಂಡ ಪಾಠ

(A) ಸ್ವೀಕರಣ (B) ಸಂದೇಹ

(C) ಪರಿಷ್ಕರಣ (D) ಪ್ರಕ್ಷೇಪ

4. ಹಣ್ಣುತಿಂದವ ನುಣುಚಿಕೊಂಡ, ಸಿಪ್ಪೆತಿಂದವ ಸಿಕ್ಕಿಕೊಂಡ ಎಂಬ ಗಾದೆಗೆ ನಿದರ್ಶನವಾಗಿರುವ ಪಂಚತಂತ್ರದ ಕಥೆ

(A) ತಿಗಣೆ ಮತ್ತು ಕೂರೆಯ ಕಥೆ (B) ಬಕ ಮತ್ತು ಏಡಿಯ ಕಥೆ

(C) ಎರಡು ಗಿಳಿಗಳ ಕಥೆ

(D) ಬ್ರಾಹ್ಮಣನು ಮುಂಗುಸಿಯನ್ನು ಕೊಂದ ಕಥೆ

5. ಶಿಕ್ಷಣದ ವಿಪರ್ಯಾಸವನ್ನು ವಸ್ತುವಾಗುಳ್ಳ ಕಾದಂಬರಿ

(A) ಯಾಪಿಲ್ಲು (B) ಬೀಜ

(C) ಉಕ್ಕಿನ ಕೋಟೆ (D) ಬಾನು ಬೆಳಗಿತು

6. ಅರಿತವರಿಗತಿ ಸುಲಭ ಹರಿಯ ಪೂಜೆ ಎಂಬುದು ಇವರ ಕೀರ್ತನೆಯ ಸಾಲು

(A) ಜಗನ್ನಾಥದಾಸ (B) ಪುರಂದರ ದಾಸ

(C) ವಿಜಯ ದಾಸ (D) ಶ್ರೀಪಾದ ರಾಜ

7. ಪಲ್ಲವರನ್ನು ಸೋಲಿಸಿದ ಅರಸರನ್ನು ಕಾಲಾನುಕ್ರಮಣಿಕೆಯಲ್ಲಿ ಗುರುತಿಸಿ

(A) ಕಾಕುತ್ಸವರ್ಮ, ಮಯೂರ, ವಿಕ್ರಮಾದಿತ್ಯ, ಇಮ್ಮಡಿ ಪುಲಿಕೇಶಿ

(B) ಇಮ್ಮಡಿ ಪುಲಿಕೇಶಿ, ಇಮ್ಮಡಿ ವಿಕ್ರಮಾದಿತ್ಯ, ಮಯೂರ, ಕಾಕುತ್ಸವರ್ಮ

(C) ಮಯೂರ, ಕಾಕುತ್ಸವರ್ಮ, ಇಮ್ಮಡಿ ಪುಲಿಕೇಶಿ, ಇಮ್ಮಡಿ ವಿಕ್ರಮಾದಿತ್ಯ

(D) ಮಯೂರ, ಇಮ್ಮಡಿ ಪುಲಿಕೇಶಿ, ಇಮ್ಮಡಿ ವಿಕ್ರಮಾದಿತ್ಯ, ಕಾಕುತ್ಸವರ್ಮ

8. ಚದುರರ ಮೆಚ್ಚು ಭಾವುಕರ ಕೈಪಿಡಿ,,,,, ಅಕ್ಕರಿಗರಾಭರಣಂ ಎಂದು ಕರ್ತೃವಿನಿಂದಲೇ ಪ್ರಶಂಸೆಗೊಂಡ ಕೃತಿ

(A) ಭರತೇಶ ವೈಭವ (B) ಕರ್ನಾಟಕ ಭಾಷಾಭೂಷಣ

(C) ಶಬ್ದಸ್ಮೃತಿ (D) ಸೂಕ್ತಿಸುಧಾರ್ಣವ

9. ವಿಶಾಲಾಕ್ಷ ಪಂಡಿತನು ಇವನ ಆಸ್ಥಾನದಲ್ಲಿ ಮಂತ್ರಿಯಾಗಿದ್ದನು

(A) ಕೃಷ್ಣದೇವರಾಯ (B) ಪ್ರೌಢದೇವರಾಯ

(C) ಚಿಕದೇವರಾಜ (D) ಇಮ್ಮಡಿ ಬಲ್ಲಾಳ

10. ಹಾನ, ಹನ ಈ ಶಬ್ದಗಳು ಬಳಕೆಯಲ್ಲಿರುವ ಪ್ರಾದೇಶಿಕ ಉಪಭಾಷಾ ಪ್ರಭೇದ

(A) ಮೈಸೂರು ಕನ್ನಡ (B) ಮಂಗಳೂರು ಕನ್ನಡ

(C) ಕಲಬುರ್ಗಿ ಕನ್ನಡ (D) ಧಾರವಾಡ ಕನ್ನಡ

11. ಹೊಂದಿಕೆಯಾಗದ ಪತ್ರಿಕೆ-ಸ್ಥಳ ಜೋಡಿಯನ್ನು ಗುರುತಿಸಿ

(A) ಕರ್ನಾಟಕ ಭಾರತಿ – ಧಾರವಾಡ (B) ಸಾಧನೆ – ಬೆಂಗಳೂರು

(C) ಜೀವನ – ಮಂಗಳೂರು (D) ವಾಗ್ಭೂಷಣ – ಧಾರವಾಡ



Teachingninja.in

12. ಇದು ಶಿವರಾಮ ಕಾರಂತರ ಕಾದಂಬರಿ ಅಲ್ಲ

(A) ಜೀವನಯಾತ್ರೆ (B) ನಂಬಿದವರ ನಾಕ ನರಕ

(C) ಧರ್ಮರಾಮನ ಸಂಸಾರ (D) ಔದಾರ್ಯದ ಉರುಳಲ್ಲಿ

13. ಚಿಮಣಾ ಪಾತ್ರವಿರುವ ಕಾದಂಬರಿ

(A) ಗ್ರಾಮಾಯಣ (B) ಇಂದಿರಾ ಬಾಯಿ

(C) ಚಿರಸ್ಮರಣೆ (D) ಸೋತು ಗೆದ್ದವಳು

14. ಇದು ಶಾಂತಕವಿ ಅವರ ನಾಟಕ

(A) ಪ್ರತಾಪರುದ್ರ ದೇವ (B) ಹೇಮಚಂದ್ರ ರಾಜ ವಿಲಾಸ

(C) ಪ್ರಿಯದರ್ಶಿಕ (D) ವತ್ಸಲಾ ಹರಣ

15. ಹಮರ್ಷಿಯ ಈ ಗ್ರೀಕ್ ಪದದ ಮೂಲ ಅರ್ಥ

(A) ಮನುಷ್ಯ ಸಹಜ ತಪ್ಪು (B) ನಾಯಕನ ಅಪೇಕ್ಷಾಭಂಗ

(C) ಗುರಿತಪ್ಪಿದ ಬಾಣ (D) ನಾಯಕನ ದೌರ್ಬಲ್ಯ

16. ಐ.ಎ. ರಿಚರ್ಡ್ಸ್ ನ ಪ್ರಕಾರ ಕೇಳುಗರ ಕುರಿತಾದ ವಕ್ತೃವಿನ ಧೋರಣೆ

(A) ಇಂಟೆನ್ಷನ್ (B) ಸೆನ್ಸ್

(C) ಟೋನ್ (D) ಫೀಲಿಂಗ್

17. ಇವು ದಕ್ಷಿಣ ದ್ರಾವಿಡ ಭಾಷೆಗಳು

(A) ತೊದ, ಮಲೆಯಾಳಂ (B) ತಮಿಳು, ಗದಬ

(C) ಪರ್ಜಿ, ಕನ್ನಡ (D) ತೆಲುಗು, ಮುಂಡ

18. ಬೆರಗು ಕೃತಿಗೆ ಪ್ರೇರಣೆ ನೀಡಿದ ಕೃತಿಕಾರ

(A) ಅಮೀರ್ ಖುಸ್ರು (B) ಖಲೀಲ್ ಗಿಬ್ರಾನ್

(C) ಉಮರ್ ಖಯ್ಯಾಮ್ (D) ಅರವಿಂದರು

19. ಚಿದಾನಂದಾವಧೂತನ ಕೃತಿ

(A) ವೇದಾಂತ ಬೋಧಿನಿ (B) ಅನುಭವ ಸಾರ

(C) ಜ್ಞಾನಸಿಂಧು (D) ವಿವೇಕ ಚಿಂತಾಮಣಿ

20. ಹುಚ್ಚುಮಲ್ಲಿ ಗುಡಿ ಇರುವ ಸ್ಥಳ

(A) ಬೇಲೂರು (B) ಐಹೊಳೆ

(C) ಬಾದಾಮಿ (D) ಹಳೇಬೀಡು

21. ಶಶಿಕಲಾ ವೀರಯ್ಯಸ್ವಾಮಿ ಅವರ ಕವನ ಸಂಕಲನ

(A) ಬಾ ಪರೀಕ್ಷೆಗೆ (B) ಗುಬ್ಬಿ ಮನೆ

(C) ಅಮೃತಮತಿಯ ಸ್ವಗತ (D) ಜೀವ ಸಂಪಿಗೆ

22. ನೀನಾರೆಂಬರಿವಾಗೆ ಸಾಕು ಸಿರಿಯೇಂ ದಾರಿದ್ರ್ಯಮೇಂ ಗ್ರಾಮಮೇಂ ಈ ಸಾಲಿನ ಛಂದೋಬಂಧ

(A) ಶಾರ್ದೂಲವಿಕ್ರೀಡಿತ ವೃತ್ತ (B) ಕಂದ ಪದ್ಯ

(C) ಚಂಪಕಮಾಲಾ ವೃತ್ತ (D) ಪಿರಿಯಕ್ಕರ

23. ಉದ್ದಾಲಕನ ಪ್ರಸಂಗವಿರುವ ಕಾವ್ಯ

(A) ಕುಮಾರ ವಾಲ್ಮೀಕಿಯ ತೊರವೆ ರಾಮಾಯಣ

(B) ಲಕ್ಷ್ಮೀಶನ ಜೈಮಿನಿ ಭಾರತ

(C) ಚಾಮರಸನ ಪ್ರಭುಲಿಂಗ ಲೀಲೆ (D) ರತ್ನಾಕರವರ್ಣಿಯ ಭರತೇಶ ವೈಭವ

24. ಹಿಮಾಲಯದವರೆಗೂ ದಂಡೆತ್ತಿ ಹೋಗಿದ್ದ ಕನ್ನಡದ ರಾಜ

(A) ಕೃಷ್ಣದೇವರಾಯ (B) ಮೂರನೆಯ ಕೃಷ್ಣ

(C) ಇಮ್ಮಡಿ ಪುಲಿಕೇಶಿ (D) ವಿಷ್ಣುವರ್ಧನ

25. ಸಾಧಾರಣೀಕರಣಕ್ಕೆ ಸಂವಾದಿಯಾದ ಪಾಶ್ಚಾತ್ಯ ಪರಿಕಲ್ಪನೆ

(A) ವ್ಯಕ್ತಿತ್ವ ನಿರಸನ (B) ಮಾನಸಿಕ ದೂರ



Teachingninja.in

(C) ಭವ್ಯತೆ (D) ಭಾವ ವಿರೇಚನ

26. ಸರಸ ಸಾಹಿತ್ಯದ ವರದೇವತೆ ಎಂಬ ಪ್ರಶಂಸೆಗೊಳಗಾದವಳು

(A) ಅತ್ತಿಮಬ್ಬೆ (B) ಹೆಳವನಕಟ್ಟೆ ಗಿರಿಯಮ್ಮ

(C) ಕಂತಿ (D) ಸಂಚಿಯ ಹೊನ್ನಮ್ಮ

27. ಆರಾಣೆ ಮೂರು ಕಾಸು – ಇದು ಇವರ ಕಥೆ

(A) ಯಶವಂತ ಚಿತ್ತಾಲ (B) ಬರಗೂರು ರಾಮಚಂದ್ರಪ್ಪ

(C) ಕೆ.ವಿ. ಪುಟ್ಟಪ್ಪ (D) ಮೊಗಳ್ಳಿ ಗಣೇಶ

28. ಒಡ್ಡಲಿ ಎಂಬ ಶಬ್ದ ಪ್ರಯೋಗವಿರುವ ಶಾಸನ

(A) ಬ್ರಹ್ಮಗಿರಿ ಶಾಸನ (B) ಹಲ್ಮಿಡಿ ಶಾಸನ

(C) ಕಪ್ಪೆ ಅರಭಟ್ಟನ ಶಾಸನ (D) ಲಕ್ಕುಂಡಿ ಶಾಸನ

29. ಲಲಿತ ರಗಳೆ ಸರಳಗೊಂಡು ಪಡೆದ ಹೊಸಗನ್ನಡದ ಛಂದೋ ರೂಪ

(A) ಸಾನೆಟ್ (B) ಪ್ರಗಾಥ

(C) ಸರಳ ರಗಳೆ (D) ಉತ್ಸಾಹ ರಗಳೆ

30. ಕವಿತ್ವ ಬೀಜಂ ಪ್ರತಿಭಾನಂ ಎಂದು ಹೇಳಿದವನು

(A) ಭಟ್ಟತೌತ (B) ವಾಮನ

(C) ಆನಂದವರ್ಧನ (D) ಭಾಮಹ

31. ರತ್ನಾಕರವರ್ಣಿಗೆ ಶ್ರೀಶುಚಿ ದೀಕ್ಷೆಯನ್ನು ಕೊಟ್ಟ ಗುರು

(A) ವಿಜಯ ಕೀರ್ತಿ (B) ಪಂಡಿತ ಯೋಗಿ

(C) ಪೂಜ್ಯಪಾದ (D) ಚಾರುಕೀರ್ತಿ

32. ಅನುಕಾರ್ಯನಿಗೂ ಅನುಕರ್ತನಿಗೂ ಇರುವ ಸಂಬಂಧದ ಸ್ವರೂಪವನ್ನು ಸ್ಪಷ್ಟಪಡಿಸುವ ನ್ಯಾಯ

(A) ಚಿತ್ರತುರಗ ನ್ಯಾಯ (B) ದೇಹಲೀದೀಪ ನ್ಯಾಯ

(C) ಕಾಕತಾಳೀಯ ನ್ಯಾಯ (D) ಅಂಧಗಜ ನ್ಯಾಯ

33. ಜಿನವಲ್ಲಭನ ಗುರು

(A) ಜಯಣಂದಿ ಸಿದ್ಧಾಂತ ಭಟಾರ (B) ಗುಣನಂದಿ ಸಿದ್ಧಾಂತ ಭಟಾರ

(C) ದೇವೇಂದ್ರ ಮುನೀಂದ್ರ ಭಟಾರ (D) ದಿವಾಕರ ನಂದಿ ಭಟ್ಟಾರಕ

34. ಇವು ಆಖ್ಯಾತ ವಿಭಕ್ತಿ ಪ್ರತ್ಯಯಗಳು

(A) ದಿರ್, ವಿರ್, ಕಳ್, ಗಳ್ (B) ಮ್, ಅಮ್, ಇಂ, ಕೆ

(C) ಇತಿ, ಇತ್ತಿ, ಇ, ಎ

(D) ಅಮ್, ಆರ್, ಅಯ್, ಇರ್, ಎನ್, ಎವು

35. ಚಂದ್ರಗುಪ್ತನು ಈ ಸ್ಥಳಕ್ಕೆ ಬಂದಿದ್ದನು

(A) ಐಹೊಳೆ (B) ಶ್ರವಣಬೆಳಗೊಳ

(C) ಚಂದ್ರವಳ್ಳಿ (D) ಕೊಪ್ಪಳ

36. ಆರೂಢಜ್ಞಾನಿಯಾದವಂಗೆ ಅನುಭಾವವೇಕಯ್ಯಾ ಎಂದು ಹೇಳಿದ ವಚನಕಾರರು

(A) ಅಲ್ಲಮಪ್ರಭು (B) ಮುಕ್ತಾಯಕ್ಕ

(C) ಅಂಬಿಗರ ಚೌಡಯ್ಯ (D) ಚನ್ನಬಸವಣ್ಣ

37. ಕದಂಬ ಕಾಮದೇವನನ್ನು ಕಾಮದೇವನೊಂದಿಗೆ ಸಮೀಕರಿಸಿ ಬರೆದ ಕಾವ್ಯ

(A) ಮದನ ತಿಲಕ (B) ಕಬ್ಬಿಗರ ಕಾವ

(C) ಮನ್ಮಥ ವಿಜಯ (D) ಭುಜಬಲಿ ಚರಿತೆ

38. ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ ಬಂದಲ್ಲಿ ಬಂದಪೆಂ ನುಡಿದಲ್ಲಿ ನುಡಿದಪೆಂ - ಈ ಪಾದಯುಗ್ಮದ ಛಂದೋಬಂಧ



Teachingninja.in

(A) ಮಂದಾನಿಲ ರಗಳೆ (B) ದ್ವಿಪದಿ

(C) ಲಲಿತ ರಗಳೆ (D) ಏಳೆ

39. ಕಾವ್ಯದ ಆತ್ಮವನ್ನು ಕುರಿತು ಮೊದಲ ಬಾರಿಗೆ ವಿಚಾರ ಮಾಡಿದ ಲಾಕ್ಷಣಿಕ

(A) ಭಾಮಹ (B) ವಾಮನ

(C) ಜಗನ್ನಾಥ ಪಂಡಿತ (D) ರುಯ್ಯಕ

40. ಸ್ತ್ರೀವಾದಿ ವಿಮರ್ಶೆಗೆ ಗೈನೋಕ್ರಿಟಿಸಿಸಮ್ ಎಂಬ ಹೆಸರನ್ನು ಬಳಸಿದವರು

(A) ಸಿಮೊನ್ ದ ಬುವಾ (B) ವರ್ಜೀನಿಯಾ ವುಲ್ಫ್

(C) ಎಲಾನ್ ಶೊಆಲ್ವರ್ (D) ಬೆಟ್ಟಿ ಫ್ರೀಡನ್

41. ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು ಎಂಬುವುದು ಇದಕ್ಕೆ ನಿದರ್ಶನ

(A) ಗುಣೀಭೂತ ವ್ಯಂಗ್ಯ (B) ವಾಚ್ಯಾರ್ಥ

(C) ಲಕ್ಷ್ಯಾರ್ಥ

(D) ಅತ್ಯಂತ ತಿರಸ್ಕೃತ ವಾಚ್ಯಧ್ವನಿ

42. ಸಂಶೋಧನಾ ಬರವಣಿಗೆಯ ಭಾಷೆ ಹೀಗಿರಬೇಕು

(A) ಸರಳ, ಸ್ಪಷ್ಟ, ತರ್ಕಬದ್ಧ, ನೇರ

(B) ವಿಸ್ತರಿತ, ಆಲಂಕಾರಿಕ, ಕ್ಲಿಷ್ಟ, ಶ್ಲೇಷಾಯುಕ್ತ

(C) ವರ್ಣನಾತ್ಮಕ, ಪಾಂಡಿತ್ಯ ಪ್ರದರ್ಶನಾತ್ಮಕ

(D) ಅತಿಪ್ರೌಢ, ದೀರ್ಘ, ಸಂಕೀರ್ಣ

43. ಥೀಸಿಸ್ – ಆ್ಯಂಟಿ ಥೀಸಿಸ್ – ಸಿಂಥೆಸಿಸ್ ಎಂಬ ತಾತ್ವಿಕತೆಯನ್ನು ಮಾರ್ಕ್ಸವಾದಿ ವಿಮರ್ಶೆಗೆ ಒದಗಿಸಿಕೊಟ್ಟವರು

(A) ಹೆಗಲ್ (B) ಲೆನಿನ್

(C) ನೀಷೆ (D) ಶೋಪನ್ ಹಾವರ್

44. ಶಬ್ದಸ್ಮೃತಿ ಅಧಿಕರಣವು ಈ ಕೃತಿಯಲ್ಲಿದೆ

(A) ಕಾವ್ಯಾವಲೋಕನ (B) ಶಬ್ದಮಣಿ ದರ್ಪಣ

(C) ಶಬ್ದಾನುಶಾಸನ (D) ಕರ್ನಾಟಕ ಭಾಷಾಭೂಷಣ

45. ರಾಗದ್ವೇಷಯುಕ್ತ ಲೌಕಿಕ ಕಾವ್ಯಗಳನ್ನು ವಿಷೋದ್ಯಾನಗಳೆಂದು ಹೇಳಿದ ಕವಿ

(A) ಹರಿಹರ (B) 2ನೇ ನಾಗವರ್ಮ

(C) ಲಕ್ಷ್ಮೀಶ (D) ನಾಗಚಂದ್ರ

46. ಕರ್ನಾಟಕ ವಿದ್ಯಾವರ್ಧಕ ಸಂಘದ ಸಂಸ್ಥಾಪಕರು

(A) ರಾ.ಹ. ದೇಶಪಾಂಡೆ (B) ಧೋ.ನ. ಮುಳಬಾಗಿಲ

(C) ಪಾಟೀಲ ಪುಟ್ಟಣ್ಣ (D) ಫ.ಗು, ಹಳಕಟ್ಟಿ

47. ಇವರು ಜಾನಪದದ ವರ್ಗೀಕರಣ ಮಾಡಿದ ವಿದ್ವಾಂಸರು

(A) ಆರ್. ಎಸ್. ಬಾಗ್ಸ್ (B) ಜೀ.ಶಂ. ಪರಮಶಿವಯ್ಯ

(C) ಕಾಲ್ಡವೆಲ್ (D) ಸಿ.ಎಂ. ಬೌರಾ

48. ಸಿಂಟ್ಯಾಕ್ಟಿಕ್ ಸ್ಟ್ರಕ್ಚರ್ಸ್ ಕೃತಿಯ ಕರ್ತೃ

(A) ನೋಮ್ ಚಾಮ್‌ಸ್ಕಿ (B) ರಾಬರ್ಟ್ ಕಾಲ್ಡವೆಲ್

(C) ಎಲ್. ಬ್ಲೂಮ್ ಫೀಲ್ಡ್ (D) ಬ್ಲಾಕ್ ಮತ್ತು ಟ್ರೆಗರ್

49. ಕರ್ನಾಟಕದಲ್ಲಿ ಸ್ಥಾಪಿತವಾದ ಸರ್ಕಾರಿ ಹಸ್ತಪ್ರತಿ ಭಂಡಾರ

(A) ಸರಸ್ವತೀ ಭಂಡಾರ

(B) ಬಿ.ಎಂ.ಶ್ರೀ. ಸಂಶೋಧನ ಪ್ರತಿಷ್ಠಾನ

(C) ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್

(D) ಮಂಜೂಷ ಹಸ್ತಪ್ರತಿ ಭಂಡಾರ



Teachingninja.in

**50.** ದೇವನೊಲಿದವನ ಕುಲ ಸತ್ಕುಲಂ, ಘನ ಮಹಿಮನೊಲಿದ ಜಾತಿಯೆ ಜಾತಿ ನಿರ್ಮಲಂ ಎಂಬ ಉಕ್ತಿಯಿರುವ ಹರಿಹರನ ರಗಳೆ

**(A)** ಬಸವ ಪವಾಡ ರಗಳೆ **(B)** ಮಾದಾರ ಚನ್ನಯ್ಯನ ರಗಳೆ

**(C)** ಮಲುಹಣನ ರಗಳೆ **(D)** ನಂಬಿಯಣ್ಣನ ರಗಳೆ

**51.** ಶ್ರೀಕೃಷ್ಣ ಪಾರಿಜಾತ ವು

**(A)** ಸಣ್ಣಾಟ **(B)** ದೊಡ್ಡಾಟ

**(C)** ಯಕ್ಷಗಾನ **(D)** ಬಡಗತಿಟ್ಟು ಯಕ್ಷಗಾನ

**52.** ಪ್ರಗಾಥದ ಮೂಲವಾದ ಓಡ್ ಎಂಬುದು ಮೂಲತಃ ಈ ಭಾಷೆಗೆ ಸೇರಿದ್ದು

**(A)** ಗ್ರೀಕ್ **(B)** ಲ್ಯಾಟಿನ್

**(C)** ಇಂಗ್ಲಿಷ್ **(D)** ಇಟಾಲಿಯನ್

**53.** ಉಟ್ಟುದ ತೊರೆದವಂಗೆ ಊರೇನು ಕಾಡೇನು ಎಂದು ಹೇಳಿದ ವಚನಕಾರರು

**(A)** ಅಕ್ಕಮಹಾದೇವಿ **(B)** ನೀಲಲೋಚನೆ

**(C)** ಅಲ್ಲಮ ಪ್ರಭು **(D)** ಮುಕ್ತಾಯಕ್ಕ

**54.** ಎರೆಯಪ್ಪನನ್ನು ನಾಯಕನನ್ನಾಗಿಸಿಕೊಂಡು ಕಾವ್ಯ ರಚಿಸಿದವನು

**(A)** ಅಸಗ **(B)** 1ನೇ ಗುಣವರ್ಮ

**(C)** ಗುಣನಂದಿ **(D)** ದುರ್ಗಸಿಂಹ

**55.** ಈ ಪಟ್ಟಿಗಳಲ್ಲಿ ಹೊಂದಿಕೆಯಾಗುವ ಉತ್ತರವನ್ನು ಗುರುತಿಸಿ

i. ದ.ರಾ. ಬೇಂದ್ರೆ a. ಅಮ್ಮನ ಗುಡ್ಡ
ii. ನಿಸಾರ್ ಅಹಮದ್ b. ನಾವು ಹುಡುಗಿಯರೇ ಹೀಗೆ
iii. ಚ. ಸರ್ವಮಂಗಳ c. ವಿನಯ
iv. ಪ್ರತಿಭಾ ನಂದಕುಮಾರ d. ಸಂಜೆ ಐದರ ಮಳೆ
e. ಹರಿವ ನೀರಿದು

**(A)** i–d, ii–a, iii–e, iv–b **(B)** i–c, ii–d, iii–a, iv–b

**(C)** i–e, ii–b, iii–c, iv–a **(D)** i–b, ii–e, iii–d, iv–a

**56.** ಗ್ರಂಥ ಸಂಪಾದಕರು ಕೈಗೊಳ್ಳಬೇಕಾದ ನಾಲ್ಕು ಬಗೆಯ ಕಾರ್ಯಗಳು

**(A)** ಸ್ವೀಕರಣ, ಸಂದೇಹ, ವರ್ಜನ, ಪರಿಷ್ಕರಣ

**(B)** ನಕಲು, ತಿದ್ದುಪಡಿ, ನಿರ್ಧಾರ, ಕಲ್ಪನೆ

**(C)** ಸ್ಥಾನ ಪಲ್ಲಟ, ಸಂಕಲನ, ಪ್ರಕಟಣೆ, ಶೋಧನೆ

**(D)** ಸ್ವೀಕರಣ, ಪ್ರಕಟಣೆ, ನಕಲು

**57.** ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತರು

**(A)** ಬಿ.ವಿ. ವೈಕುಂಠರಾಜು **(B)** ಚಂದ್ರಶೇಖರ ಕಂಬಾರ

**(C)** ಏಣಗಿ ಬಾಳಪ್ಪ **(D)** ಲಿಂಗದೇವರು ಹಳೇಮನೆ

**58.** ಕಮಲ ಕುಮಾರಿ ಕಾದಂಬರಿಯ ಕರ್ತೃ

**(A)** ಎಂ. ಎಸ್. ಪುಟ್ಟಣ್ಣ **(B)** ಬೋಳಾರ ಬಾಬೂರಾಯ

**(C)** ಬೆಟಗೇರಿ ಕೃಷ್ಣಶರ್ಮ **(D)** ಗಳಗನಾಥ

**59.** ಚಿತ್ರಕೃತಿ ಎಂಬ ಪ್ರಶಂಸೆಗೆ ಪಾತ್ರವಾದ ಕೃತಿ

**(A)** ಸಾಹಸಭೀಮ ವಿಜಯ **(B)** ವಡ್ಡಾರಾಧನೆ

**(C)** ಕವಿರಾಜ ಮಾರ್ಗ **(D)** ಪಂಚ ತಂತ್ರ

**60.** ಭಾಷೆಯಲ್ಲಿ ಲಾಂಗ್ ಮತ್ತು ಪರೋಲ್ ಎಂಬ ಸ್ತರಗಳನ್ನು ಗುರುತಿಸಿದವನು

**(A)** ಹಂಬೋಲ್ಟ್ **(B)** ಫರ್ಡಿನಾಂಡ್ ಡಿ ಸಸೂರ್



Teachingninja.in

(C) ಎಮಿಲಿ ಡರ್ಕಿಮ್ (D) ನೋಮ್ ಚಾಮ್‌ಸ್ಕಿ

61. ಮಹಾಪುರಾಣವನ್ನು ಕನ್ನಡಕ್ಕೆ ತಂದವರು

(A) ಆ.ನೇ. ಉಪಾಧ್ಯೆ (B) ಹಸ್ತಿಮಲ್ಲ

(C) ಚಾವುಂಡರಾಯ (D) ದೇವಚಂದ್ರ

62. ಇದೊಂದು ವ್ಯಾಜಸ್ತುತಿ ಕೀರ್ತನೆಯ ಸಾಲು

(A) ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಿಕೊಳ್ಳಲು ಬೇಡಿ

(B) ಆರು ಬದುಕಿದರಯ್ಯ ಹರಿ ನಿನ್ನ ನಂಬಿ

(C) ಕುಲ ಕುಲ ಕುಲವೆಂದು ಹೊಡೆದಾಡದಿರಿ

(D) ಕೊಳಲನೂದುವ ಚದುರನಾರೆ ನೋಡಮ್ಮ

63. ಹಂಪೆಯರಸನ ಪೊಗಳ್ವ ನಾಲಗೆಯೊಳನ್ಯದೈವವ ಭವಿಗಳಂ ಕೀರ್ತಿಸಿದೆನಾದೊಡೆ ಮನಸಿಜಾರಿಯ ಭಕ್ತನಲ್ಲ ಎಂದು ಹೇಳಿದ ಕವಿ

(A) ಹರಿಹರ (B) ರಾಘವಾಂಕ

(C) ಕೆರೆಯ ಪದ್ಮರಸ (D) ಚಾಮರಸ

64. ರಂಗಾಯಣದ ನಿರ್ದೇಶಕರ ಕಾಲಾನುಕ್ರಮಣಿಕೆ

(A) ಬಿ.ವಿ. ಕಾರಂತ, ಪ್ರಸನ್ನ, ಬಿ. ಜಯಶ್ರೀ, ಬಿ.ವಿ. ರಾಜಾರಾಂ

(B) ಬಿ.ವಿ. ಕಾರಂತ, ಸಿ. ಬಸವಲಿಂಗಯ್ಯ, ಪ್ರಸನ್ನ, ಚಿದಂಬರರಾವ್ ಜಂಬೆ

(C) ಪ್ರಸನ್ನ, ಲಿಂಗದೇವರು ಹಳೇಮನೆ, ಹೆಚ್. ಜನಾರ್ಧನ , ಸಿ. ಬಸವಲಿಂಗಯ್ಯ

(D) ಬಿ.ವಿ. ಕಾರಂತ, ಚಿದಂಬರರಾವ್ ಜಂಬೆ, ಹೆಚ್. ಜನಾರ್ಧನ ಬಿ. ಜಯಶ್ರೀ

65. ಇದು ಪಂಪ ಪ್ರಶಸ್ತಿ ಪಡೆದ ಕೃತಿ

(A) ಕರ್ಣಾಟಕ ಸಂಸ್ಕೃತಿ ಸಮೀಕ್ಷೆ (B) ಭಾರತೀಯ ಕಾವ್ಯಮೀಮಾಂಸೆ

(C) ಮಂಕುತಿಮ್ಮನ ಕಗ್ಗ (D) ಪಾಶ್ಚಾತ್ಯ ಕಾವ್ಯಮೀಮಾಂಸೆ

66. ಇದು ಹಳಗನ್ನಡ ಭಾಷಾ ಅವಸ್ಥೆಗೆ ಸೇರುವ ಶಬ್ದ

(A) ವೆಟ್ಟದುಳ್ (B) ಬೆಟ್ಟದೊಳ್

(C) ಬೆಟ್ಟದಲ್ಲಿ (D) ಬೆಟ್ಟದೊಳು

67. ಕೋಲರಿಜ್ ಪ್ರಕಾರ ಕವಿಕರ್ಮ ಹುಟ್ಟುವುದು ಇದರಿಂದ

(A) ಪ್ರೈಮರಿ ಇಮ್ಯಾಜಿನೇಶನ್ (B) ಯೂನಿಟಿ

(C) ಸೆಕೆಂಡರಿ ಇಮ್ಯಾಜಿನೇಶನ್ (D) ಡಯಲೆಕ್ಟಿಕ್

68. ವಿಪುಲ ಶೈಲಸ್ತಂಭ ದೀಪಕೆಯಂತೆ ರವಿ ಮೆರೆದ ಎಂಬ ಕುಮಾರವ್ಯಾಸನ ಧ್ವನಿಪೂರ್ಣ ಮಾತು ಇವರನ್ನು ಕುರಿತದ್ದಾಗಿದೆ

(A) ಭೀಷ್ಮ (B) ಕೃಷ್ಣ

(C) ದ್ರೋಣ (D) ಕರ್ಣ

69. ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ನಾಟಕದ ಕನ್ನಡ ರೂಪಾಂತರಿತ ಕೃತಿ

(A) ಶೂರಸೇನ ಚರಿತ್ರೆ (B) ಪ್ರಮೀಳಾರ್ಜುನೀಯಂ

(C) ಪ್ರತಾಪರುದ್ರದೇವ (D) ರಾಮವರ್ಮ ಲೀಲಾವತಿ

70. ಹಲವರ ವಿವೇಕ ಒಬ್ಬನ ವಾಕ್ಚಾತುರ್ಯವಾಗಿ ಭಟ್ಟಿಯಿಳಿದದ್ದೇ ಗಾದೆ ಎಂಬ ವ್ಯಾಖ್ಯೆ ನೀಡಿದವರು

(A) ಬೇಕನ್ (B) ದ.ರಾ. ಬೇಂದ್ರೆ

(C) ರಾಗೌ (D) ಲಾರ್ಡ್ ಜಾನ್ ರಸಲ್

71. ಏಕೈಕ ಹಸ್ತಪ್ರತಿ ಬಳಸಿ ಸಂಪಾದಿತವಾದ ಕೃತಿ

(A) ಭರತೇಶ ವೈಭವ (B) ನಳ ಚರಿತ್ರೆ



Teachingninja.in

(C) ಶಬ್ದಮಣಿ ದರ್ಪಣ

(D) ನಾಗವರ್ಮ ನ ಕರ್ಣಾಟಕ ಕಾದಂಬರಿ

72. ಇದೊಂದು ರೂಪಾಂತರಿತ ಕವಿತೆ

(A) ತೆಂಕಣ ಗಾಳಿಯಾಟ (B) ವನಸುಮ

(C) ಕಣಿವೆಯ ಮುದುಕ (D) ಭಾವತರಂಗ

73. ಕಾಳಿದಾಸನ ಕೃತಿಯನ್ನು ಆಧರಿಸಿ ಕನ್ನಡದಲ್ಲಿ ಕಾವ್ಯ ರಚಿಸಿದ ಕವಿ

(A) ದುರ್ವಿನೀತ (B) ಗುಣನಂದಿ

(C) ಅಸಗ (D) 2ನೇ ನಾಗವರ್ಮ

74. ಶಬ್ದಾನುಶಾಸನ ಪ್ರಭವ ವಚೋವಿಭವ ನೆಂದು ತನ್ನನ್ನು ತಾನೇ ವರ್ಣಿಸಿಕೊಂಡ ಕವಿ

(A) ಭಟ್ಟಾಕಲಂಕ (B) ರನ್ನ

(C) ಕವಿಕಾಮ (D) ಬಂಧುವರ್ಮ

75. ಧಾತುಗಳಿಗೆ ಕೃತ್ಪ್ರತ್ಯಯಗಳು ಸೇರಿದಾಗ ಸಿದ್ಧವಾಗುವ ರೂಪ

(A) ದಿಗ್ವಾಚಕ (B) ಕೃದಂತ

(C) ತದ್ಧಿತ (D) ಅವ್ಯಯ

76. ವೀರಸಿದ್ಧಾಂತ ಶಾಸನದ ಪ್ರಸ್ತಾಪವಿರುವ ಕೃತಿ

(A) ಗೊಮ್ಮಟ ಜಿನಸ್ತುತಿ (B) ಸಿದ್ಧಾಂತ ಕೌಮುದಿ

(C) ವಿಕ್ರಮಾರ್ಜುನ ವಿಜಯ (D) ಸಿದ್ಧಾಂತ ಶಿಖಾಮಣಿ

77. ಬಲುಬೆಟ್ಟ ಬೆರಳಲ್ಲಿ ಎತ್ತಿದ ಕೈಗೆ ಹೊನ್ನು ತಾ ಗುಬ್ಬಿ ಹೊನ್ನು ತಾ ಎಂಬ ಸಾಲುಳ್ಳ ಕೀರ್ತನೆಯ ಕರ್ತೃ

(A) ಜಗನ್ನಾಥದಾಸ (B) ಶ್ರೀಪಾದರಾಜ

(C) ಹೆಳವನಕಟ್ಟೆ ಗಿರಿಯಮ್ಮ (D) ಕನಕದಾಸ

78. ವರನ್ತೇಜಸ್ವಿನೋ ಮೃತ್ಯುರ್ನ ತು ಮಾನಾವ ಖಣ್ಡನಮ್ ಈ ಸಾಲನ್ನುಳ್ಳ ಶಾಸನ

(A) ತಮಟಕಲ್ಲು ಶಾಸನ (B) ಜಿನವಲ್ಲಭನ ಶಾಸನ

(C) ದೇಕಬ್ಬೆಯ ಶಾಸನ (D) ಬಾದಾಮಿ ಕಪ್ಪೆ ಅರಭಟ್ಟನ ಶಾಸನ

79. ಉದ್ದಂಡ ಷಟ್ಪದಿಯ ಮೂರನೆಯ ಪಾದದ ಗಣಗಳ ಸಂಖ್ಯೆ

(A) ಎಂಟು (B) ಒಂಬತ್ತು

(C) ಏಳು + ಗುರು (D) ಆರು + ಗುರು

80. ಬಿಡೆನಾಂ ನೀಂ ಸಾಯೆ ಸಾವೆನಲ್ಲದುಳಿಯೆಂ ಎಂದು ಹೇಳಿದವರು

(A) ರಾವಣ (B) ಕೀಚಕ

(C) ರತ್ನಾಜಿ (D) ಚಂಡ ಶಾಸನ

81. ಮುಳ್ಳುಗಳು ಕಥಾ ಸಂಕಲನದ ಲೇಖಕರು

(A) ಬೆಸಗರಹಳ್ಳಿ ರಾಮಣ್ಣ (B) ವೀಣಾ ಶಾಂತೇಶ್ವರ

(C) ಬಾನು ಮುಷ್ತಾಕ್ (D) ಎಸ್. ದಿವಾಕರ

82. ಗತಪ್ರತ್ಯಾಗತದ ಕರ್ತೃ

(A) ಚಾವುಂಡರಾಯ (B) ಕೇಶಿರಾಜ

(C) ಪೊನ್ನ (D) ಬ್ರಹ್ಮಶಿವ

83. ಉಂಡೆಯ ಪರ್ವದ ಉಲ್ಲೇಖವಿರುವ ವಡ್ಡಾರಾಧನೆಯ ಕಥೆ

(A) ಸುಕುಮಾರ ಸ್ವಾಮಿಯ ಕಥೆ (B) ಕಾರ್ತಿಕ ರಿಸಿಯ ಕಥೆ

(C) ಗುರುದತ್ತ ಭಟಾರರ ಕಥೆ (D) ದಂಡಕನೆಂಬ ರಿಸಿಯ ಕಥೆ

84. ಕೊಡುವಾತನೆ ಹರನು ಪಡೆವಾತನೆ ನರನು ಎಂಬ ಉಕ್ತಿ



Teachingninja.in

ಇವರದು

(A) ಬಸವಣ್ಣ (B) ಸರ್ವಜ್ಞ

(C) ಸಿದ್ಧರಾಮ (D) ನಿಜಗುಣ ಶಿವಯೋಗಿ

85. ಈ ಕವಿಯ ಸ್ವಹಸ್ತಾಕ್ಷರ ಹಸ್ತಪ್ರತಿ ಉಪಲಬ್ಧವಿದೆ

(A) ಚಂದ್ರಸಾಗರ ವರ್ಣಿ (B) ಚಂದ್ರಮ

(C) ರತ್ನಾಕರ ವರ್ಣಿ (D) ಷಡಕ್ಷರ ದೇವ

86. ಜೈನಧರ್ಮದ ಹದಿನಾಲ್ಕು ಗುಣಗಳನ್ನು ಅನಾವರಣಗೊಳಿಸುವ ಕೃತಿ

(A) ವಡ್ಡಾರಾಧನೆ (B) ಸಮಯ ಪರೀಕ್ಷೆ

(C) ಧರ್ಮಾಮೃತ (D) ಚಾವುಂಡರಾಯ ಪುರಾಣ

87. ಅಪ್ರತಿಮವೀರ ಚರಿತೆ ಯು ಈ ಕೃತಿಯನ್ನು ಅನುಸರಿಸಿ ರಚನೆಯಾಗಿದೆ

(A) ದಶಕುಮಾರ ಚರಿತೆ (B) ನಾಗಾನಂದ

(C) ಕುವಲಯಾನಂದ (D) ವಿಕ್ರಮಾಂಕದೇವ ಚರಿತೆ

88. ಆಕೃತಿಮಾ ಎಂಬುದು

(A) ಅರ್ಥ ವಿಸ್ತಾರದ ಸ್ವತಂತ್ರ ರೂಪ

(B) ಅರ್ಥ ವಿಹೀನವಾದ ಉಚ್ಚಾರದ ಅತಿ ಸಣ್ಣ ಘಟಕ

(C) ಅರ್ಥವತ್ತಾದ ಉಚ್ಚಾರದ ಅತಿಸಣ್ಣ ಘಟಕ

(D) ವ್ಯಾಕರಣಬದ್ಧ ಸ್ವತಂತ್ರ ವಾಕ್ಯ

89. ಮುದ್ದಣನ ಅನುಪಲಬ್ಧ ಅಪೂರ್ಣ ಕಾದಂಬರಿ

(A) ಗೋದಾವರಿ (B) ನೇತ್ರಾವತಿ

(C) ವೇದಾವತಿ (D) ಮನೋರಮೆಯ ಸ್ವಗತ

90. ಸಾನೆಟ್ ನ್ನು ಚತುರ್ದಶಪದಿ ಎಂದು ಕರೆದವರು

(A) ಗೋವಿಂದ ಪೈ (B) ಮಾಸ್ತಿ

(C) ದ.ರಾ. ಬೇಂದ್ರೆ (D) ಡಿ. ಎಸ್. ಕರ್ಕಿ

91. ಫೋಕ್ಲೋರ್ ಪದವನ್ನು ಕುರಿತು ಡಬ್ಲ್ಯೂ.ಜೆ. ಥಾಮ್ಸ್ ನ ಲೇಖನ ಪ್ರಕಟವಾದ ಪತ್ರಿಕೆ

(A) ಜಾನಪದ ಜಗತ್ತು (B) ಅಮೇರಿಕನ್ ಫೋಕ್‌ಲೋರ್

(C) ದಿ ಅಥನಿಯಮ್

(D) ಅಂಡರ್ಸ್ಟ್ಯಾಂಡಿಂಗ್ ಫೋಕ್‌ಲೋರ್

92. ಕನ್ನಡದ ಹಸ್ತಪ್ರತಿಗಳನ್ನು ಸಂಗ್ರಹ ಮಾಡಿದ ಮೊದಲಿಗ

(A) ಆರ್. ನರಸಿಂಹಾಚಾರ್ (B) ಕರ್ನಲ್ ಮೆಕೆಂಜಿ

(C) ಬಿ. ಎಲ್. ರೈಸ್ (D) ಡಿ. ಎಲ್. ನರಸಿಂಹಾಚಾರ್

93. ನಾಟ್ಯಕ್ಕೆ ಮಾತ್ರ ಮೀಸಲಿದ್ದ ರಸವನ್ನು ಕಾವ್ಯ ಪ್ರಕಾರಗಳೆಲ್ಲಕ್ಕೂ ಮೊದಲು ವಿಸ್ತರಿಸಿದವನು

(A) ಅಭಿನವಗುಪ್ತ (B) ಭಾಮಹ

(C) ಆನಂದವರ್ಧನ (D) ಲೊಲ್ಲಟ

94. ಇದು ಸಿದ್ಧರಾಮನ ವಚನದ ಸಾಲು

(A) ಕಾಯದ ಮೊದಲಿಂಗೆ ಬೀಜವಾವುದೆಂದರಿಯದೀ ಲೋಕ

(B) ಕಾಯ ಧರಿಸಿದವ ನವನೀತ ರೋಮದಂತಿರಬೇಕು

(C) ಬೊಮ್ಮನನು ಅರಿದಿಹರೆ ತಾ ಸುಮ್ಮನಿರಬೇಕು

(D) ಒಡಲುಗೊಂಡ ಒಡಲುವಿಡಿಯದೆ ಒಡಲಿಲ್ಲದ ನಿಜವ ಬೆರೆಸೆಲವೋ

95. ಬಸವಣ್ಣನವರನ್ನು ಕೇಂದ್ರವಾಗಿಟ್ಟುಕೊಂಡು ಷಡಕ್ಷರದೇವನು ಬರೆದ ಕೃತಿ

(A) ಬಸವರಾಜ ದೇವರ (B) ಬಸವ ಪುರಾಣ



Teachingninja.in

ರಗಳೆ

(C) ವೃಷಭೇಂದ್ರ ವಿಜಯ (D) ಬಿಜ್ಜಳರಾಯ ಚರಿತೆ

96. ಮಿತಾಕ್ಷರದ ಕರ್ತೃವಿನ ಆಶ್ರಯದಾತ

(A) ಇಮ್ಮಡಿ ಪುಲಿಕೇಶಿ (B) ಇಮ್ಮಡಿ ವಿಕ್ರಮಾದಿತ್ಯ

(C) ಮುಮ್ಮಡಿ ಕೃಷ್ಣ (D) ಆರನೆಯ ವಿಕ್ರಮಾದಿತ್ಯ

97. ರುದ್ರಟ ಪ್ರತಿಪಾದಿಸಿದ ಸ್ನೇಹವನ್ನು ಸ್ಥಾಯಿಯಾಗುಳ್ಳ ಹತ್ತನೆಯ ರಸ

(A) ಅಂತಃಕರಣ (B) ವಾತ್ಸಲ್ಯ

(C) ಶ್ರೇಯಾನ್ (D) ಪ್ರೇಯಾನ್

98. ಇದು ಬಿ.ಎಂ.ಶ್ರೀ. ಅವರ ಸ್ವತಂತ್ರ ಕವಿತೆ

(A) ದುಃಖಸೇತು (B) ಮುದ್ದಿನ ಕುರಿಮರಿ

(C) ಕಾರಿಹೆಗ್ಗಡೆಯ ಮಗಳು (D) ಕಾಣಿಕೆ

99. ಕೆಂಪು ನಾರಾಯಣನ ಮುದ್ರಾಮಂಜೂಷ ಕೃತಿಯ ಆಕರ

(A) ಸಿರಿಭೂವಲಯ (B) ಮೃಚ್ಛಕಟಿಕ

(C) ಮುದ್ರಾರಾಕ್ಷಸ (D) ಮುದ್ರೆಯುಂಗುರ

100. ಬುರುಡಿ ಬಾಬಾನ ಲಕ್ಷಾಪಹರಣ ಪ್ರಸಂಗ ನಾಟಕದ ಕರ್ತೃ

(A) ಚಂದ್ರಶೇಖರ ಕಂಬಾರ (B) ಟಿ. ಎನ್. ಸೀತಾರಾಮ್

(C) ಚಂದ್ರಶೇಖರ ಪಾಟೀಲ (D) ಟಿ. ಶ್ರೀನಿವಾಸ ರಾಜು



Teachingninja.in

SPACE FOR ROUGH WORK



Teachingninja.in